# ಜನಪದ ಸಾಹಿತ್ಯದಲ್ಲಿನ ಮಾತೃತ್ವ ಭಾವ

***ಡಾ.ಭಾರತಿ ಟಿ.ಸಿ, ಕನ್ನಡ ಸಹ ಪ್ರಾಧ್ಯಾಪಕರು,ಸರ್.ಎಂ.ವಿ.ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು,ಭದ್ರಾವತಿ**

ಜನಪದರ ಬದುಕಿನ ಬಿಂಬದಲ್ಲಿ, ಜನ ಸಾಮಾನ್ಯರ ಆಡು ಮಾತಿನಲ್ಲಿ ಆ ನೆಲದ ಸಂಸ್ಕೃತಿಯ ನೈಜ ರೂಪವನ್ನು ಕಾಣಬಹುದಾಗಿದೆ. ಜನಪದ ಸಾಹಿತ್ಯದಲ್ಲಿ "ಮಾತೃತ್ವ" ಬದುಕಿನ ಒಂದು ಮೌಲ್ಯವಾಗಿ ಬಿಂಬಿತವಾಗಿದೆ. ಜನಪದ ಸಾಹಿತ್ಯದಲ್ಲಿ ತಾಯಿಯ ಬಗ್ಗೆ, ಮಗುವಿನ ಬಗ್ಗೆ, ಮಾತೃ ವಾತ್ಸಲ್ಯದ ಬಗ್ಗೆ ವರ್ಣಿತವಾಗಿರುವಷ್ಟು ಬಹುಶಃ ಶಿಷ್ಟ ಕಾವ್ಯಗಳಲ್ಲಿಯೂ ವರ್ಣಿತವಾಗಿಲ್ಲ. ಭಾರತೀಯ ಸಂಸ್ಕೃತಿಯ ಪ್ರತಿಬಿಂಬವಾಗಿರುವ ಜನಪದ ಸಾಹಿತ್ಯದಲ್ಲಿ, ತಾಯಿಯು ಹೆಣ್ಣಿನ ಒಂದು ಪರಿಪೂರ್ಣ ರೂಪವಾಗಿ ಚಿತ್ರಿಸಲ್ಪಡುತ್ತಾಳೆ. ಕನ್ನಡ ಸಾಹಿತ್ಯದ ಮೇಲೆ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯಷ್ಟೇ ಪ್ರಭಾವವನ್ನು ಜನಪದ ಸಾಹಿತ್ಯವು ಬೀರಿದೆ. ಜನಪದ ಸಾಹಿತ್ಯ ಅವಿದ್ಯಾವಂತರಲ್ಲಿ ಅಭಿವ್ಯಕ್ತಗೊಂಡ ಸಂಸ್ಕೃತಿಯ ತಿರುಳಾಗಿದೆ. ಇದು ಸಮಗ್ರ ಜೀವನದ ಅನುಭವಗಳ, ಅನಿಸಿಕೆಗಳ ಅಭಿವ್ಯಕ್ತಿಯಾಗಿ, ಸಮಷ್ಟಿ ಮನಸ್ಸಿನ ಪ್ರತಿನಿಧಿಯಾಗಿ ಸಂಸ್ಕೃತಿಯ ನಿಧಿಗಳಾಗಿ ಪರಿಣಮಿಸಿತು. ಮಾನವೀಯವಾದ ಭಾವಗಳಿಗೆ ಜನಪದದಲ್ಲಿ ವಿಶಿಷ್ಟವಾದ ಸ್ಥಾನವಿದೆ.

ಜನಪದ ಸಾಹಿತ್ಯದಲ್ಲಿ 'ತಾಯಿ'ಯ ಸ್ಥಾನವು ಅತ್ಯಂತ ಮಿಗಿಲಾದುದು. ಸಂಬಂಧಗಳೆಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದುದು ತಾಯಿ–ಮಕ್ಕಳ ಸಂಬಂಧ. ಈ ಸಂಬಂಧಕ್ಕೆ, ಪ್ರೀತಿಗೆ ಸಮಾನವಾದುದು ಯಾವುದೂ ಇಲ್ಲ. ಆ ಪ್ರೀತಿಯ ಮಹತ್ವ, ಅಸಾಮಾನ್ಯತೆ ಅದನ್ನು ಅನುಭವಿಸಿದವರಿಗೆ ಮಾತ್ರ ಗೊತ್ತಿರುವಂತಹುದಾಗಿದೆ. ಅದನ್ನು ನೆನೆದು ಸಂತೋಷಿಸುವ ರೀತಿ ಅತ್ಯುನ್ನತವಾದುದು.

"ಯಾರ ಇದ್ದರು ನನ್ನ ತಾಯಿವ್ವನ್ಹೋಲರ
ಸಾವಿರ ಕೊಳ್ಳಿ ಒಲಿಯಾಗ; ಇದ್ದರ
ಜ್ಯೋತಿ ನಿನ್ಯಾರು ಹೋಲ್ಯಾರ ।"

ತಾಯಿಯ ಪ್ರೀತಿಯನ್ನು ಅತ್ಯಂತ ಸುಂದರವಾದ ಒಂದು ಸಾದೃಶ್ಯದೊಂದಿಗೆ ಇಲ್ಲಿ ವಿವರಿಸಲಾಗಿದೆ. ಕೊಳ್ಳಿಯು ಬೆಳಕನ್ನು ನೀಡುವಂತಹುದು, ದೀಪವು ಬೆಳಕನ್ನು ನೀಡುವಂತಹುದು. ಆದರೆ ದೇವ ಸಾನಿಧ್ಯದಲ್ಲಿ ಉರಿಯುವ ನಂದಾದೀಪಕ್ಕೆ ಒಂದು ಅಲೌಕಿಕತೆ ಇದೆ, ಶಾಂತಿ ಇದೆ, ಪಾವಿತ್ರ್ಯತೆ ಇದೆ. ಅದು ನಮಗೆ ನೀಡುವ ಆತ್ಮಿಕ ಶಾಂತಿ, ತೃಪ್ತಿ, ಸಂತಸಕ್ಕೆ ಸಮನಾದುದು ತಾಯಿಯ ಪ್ರೀತಿ. ಅದಕ್ಕೆ ಸಮನಾದುದು, ತಾಯಿಗೆ ಸಮನಾದವರು ಯಾರೂ ಇಲ್ಲ. ಅದು ನಂದಿದ ಮೇಲೆ ತವರಿನ ಸಂಬಂಧ ಕಡಿದಂತೆಯೇ. ಈ ತ್ರಿಪದಿಯಲ್ಲಿರುವ ಸಾದೃಶ್ಯವು ಸಾವಿರ ಮಾತುಗಳಲ್ಲಿ ಹೇಳುವ ಭಾವವನ್ನು ಹಿಡಿದಿಟ್ಟಿರುವುದನ್ನು ನಾವು ಕಾಣಬಹುದಾಗಿದೆ. ಆಗ ಮಗಳಿಗೆ ತಾಯಿ ಇದ್ದರೆ ಮಾತ್ರ ತವರಿನ ಅಸ್ತಿತ್ವಕ್ಕೆ ಒಂದು ಅರ್ಥ ಬರುತ್ತದೆ.

"ತಾಯಿದ್ರೆ ತವರೂರು, ನೀರಿದ್ರೆ ಹೆಗ್ಗೆರೆ।
ಆನೆಯಿದ್ರರಸು ಧೊರಿತನ । ತಾಯವ್ವ
ನೀನಿದ್ರೆ ಲೇಸು ತವರ್ಮನಿ ॥"

ಎಂದು ತಾಯಿಯ ಮಹತ್ವವನ್ನು ವಿವರಿಸುತ್ತಾಳೆ. ಎಲ್ಲಕ್ಕೂ ಒಂದೊಂದು ಅಂಶಗಳು ಅರ್ಥವನ್ನು ತಂದು ಕೊಡುತ್ತವೆ. ಹೆಗ್ಗೆರೆಗೆ ನೀರು, ದೊರೆತನಕ್ಕೆ ಆನೆಗಳು ಶೋಭೆ. ಅಂತೆಯೇ ತನ್ನ ತಾಯಿಯೇ ತನ್ನ ತವರಿನ ಬೆಳಕು ಎಂಬುದು ಮಗಳ ಭಾವನೆ

"ತಾಯಿ ಇದ್ದರೆ ಭೋಗ, ತಂದೆ ಇದ್ದರೆ ಭೋಗ
ನೀರಿದ್ರೆ ಬಾಳೆ ಗೊನೆ ಭೋಗ । ತಾಯವ್ವ
ನೀನಿದ್ರೆ ನಮಗೆ ಐಭೋಗ"

ಎಂದು ತನ್ನ ತವರಿನ ಸಮೃದ್ಧತೆಯು ತಂದೆ ತಾಯಿಯನ್ನು ಅವಲಂಬಿಸಿದೆ ಎಂದು ಭಾವಿಸುತ್ತಾಳೆ. ಅಂತಹ ತಾಯಿಗೆ ಅಕಸ್ಮಿಕವಾಗಿ ಕಾಲು ತಗುಲಿದರೂ ಸಹ ಕರ್ಮ ಬರುತ್ತದೆ ಎಂದು ಭಾವಿಸುವ ಭಕ್ತಿ, ಭಾವದ ವಾತ್ಸಲ್ಯವನ್ನು ಮಗಳು ಹೊಂದಿರುತ್ತಾಳೆ.

"ತಾಯವ್ವ ಎಂಬುವಳು ದೇವಲೋಕದ ಮನಸ್ಯಾಳು
ಕಾಲು ಸೋಕಿದರೆ ಕರ್ಮವು । ತಾಯವ್ವ
ಕಾಸಿಗ್ಹೋದರೂ ಕಳಿಯದ ।"

ಎಂದು ಈ ಪಾಪಕ್ಕಾಗಿ ಹಳಹಳಿಸುತ್ತಾಳೆ. ಇಲ್ಲಿ ಮಗಳ ಕಣ್ಣಿಗೆ ತಾಯಿಯು ನರಮನುಷ್ಯಳಲ್ಲ. ದೇವಲೋಕದ ಮನುಷ್ಯಳು, ದೈವಿಕ ನೆಲೆಯವಳು. ಅವಳಿಗೆ ಕಾಲು ಸೋಕಿದ್ದಕ್ಕಾಗಿ ಬಂದ ಪಾಪವು ಕಾಶಿಗೆ ಹೋದರೂ ನಿವಾರಣೆಯಾಗಲಾರದು ಎನ್ನುವಲ್ಲಿ ಆ ಪಾಪದ ಗುರುತ್ವವನ್ನು ಒತ್ತಿ ಹೇಳಿರುವುದನ್ನು ಕಾಣಬಹುದಾಗಿದೆ. ಇದು ಜನಪದರಲ್ಲಿದ್ದ ಮಾತೃತ್ವದ ಔನತ್ಯದ ದರ್ಶನವನ್ನು ನಮಗೆ ಮಾಡಿಸುತ್ತದೆ.

"ಅಚ್ಚಕ್ಕಿ ಇದ್ದಾಗ ನುಚ್ಚಕ್ಕಿ ಹಂಗೇನು ।
ಇಚ್ಛಾಳಗಾತಿ ತಾಯವ್ವ । ಇದ್ದಾಗ
ಲುಚ್ಚಾರ ಸಂಗ ನಮಗ್ಯಾಕ".

ತಾಯಿ ಇದ್ದಾಗ ಆಕೆಯೇ ಸರ್ವಸ್ವ . ಬೇರ್ಯಾರ ಸಹವಾಸದ ಹಂಬಲವೇ ಮನಸ್ಸಿನಲ್ಲಿ ಬಾರದು. ಗಂಡನ ಮನೆಯಲ್ಲಿದ್ದು, ತಾಯಿಯನ್ನು ಹಂಬಲಿಸುವ ಜೀವ ಬೇಡುವುದು ಹೀಗೆ.

"ತಾಯ ಕಾಣದ ಜೀವ ತಾವೂರಿ ಬಾವೂರಿ
ಭಾಳ ಬಿಸಿಲಾನ ಅವರೀಯ । ಹೂವಿನ್ಹಾಂಗ
ಬಾಡತೇವಿ ತಾಯಿ ಕರೆದೊಯ್ಯ"।

ತಾಯಿಯಿಂದ ದೂರವಾದ ಜೀವ ಆ ತಾಯ ತಂಪಿಗಾಗಿ, ಪ್ರೀತಿಗಾಗಿ, ಸಾನಿಧ್ಯಕ್ಕಾಗಿ ಕಾತರಿಸುವ ಚಿತ್ರ ಈ ತ್ರಿಪದಿಯಲ ನಮಗೆ ದೊರಕುತ್ತದೆ.

"ತಂದೀಯ ನೆನೆದರೆ ತಂಗೂಳು ಬಿಸಿಯಾಯ್ತು ।
ಗಂಗಾದೇವಿ ನನ್ನ ಹಡೆದವ್ವ ನೆನೆದರೆ
ಮಾಸಿದ ತಲೆಯು ಮಡಿಯಾಯ್ತು ॥"

ಈ ಮಾತುಗಳಿಂದ ತಾಯಿಯ ಪ್ರೀತಿಯ ಹಾಗೂ ತವರಿನ ಹಂಬಲದ, ಮತ್ತು ಆ ಸಂಬಂಧದಲ್ಲಿನ ಮಧುರತೆಯ ಅರಿವಾಗುತ್ತದೆ.

"ಮಳೆ ಬಿಟ್ಟರೂ ಮರದ ಹನಿ ಬಿಡದು
ನೀ ಬಿಟ್ಟರೂ ನಿನ್ನ ಮನೆ ಬಿಡದು
ಹಡೆದವ್ವ ನಿನ್ನಾಸೆ ನನ್ನ ಬಿಡದಲ್ಲೇ। "

ಇಲ್ಲಿ ತಾಯಿಯ ಹಾಗೂ ತವರು ಮನೆಯ ಆಸೆಯು ಮಳೆಯ ನಂತರ ಬೀಳುವ ಹನಿಗಳ ಹಾಗೆ. ಅದನ್ನು ಮರೆಯಲು ಸಾಧ್ಯವಿಲ್ಲದ್ದು, ನಿರಂತರವಾದದ್ದು.

"ಬ್ಯಾಸಗೀ ದಿವಸಕ್ಕ ಬೇವಿನ ಮರ ತಂಪ
ಭೀಮರತಿ ಎಂಬ ಹೊಳಿ ತಂಪ । ಹಡೆದವ್ವ
ನೀತಂಪ ನನ್ನ ತವರೀಗಿ ॥"

ತಾಯಿ ತನ್ನ ತವರಿನ ತಂಪು. ಅದು ಬೇಸಿಗೆಯ ಬೇವಿನ ಮರದ ತಂಪಿಗೂ, ಭೀಮರತಿ ಹೊಳೆಯ ತಂಪಿಗೂ ಸಮಾನವಾದುದು. ಇಂತಹ ತಾಯಿ ಇಲ್ಲದ ಮೇಲೆ ತವರಿನ ಮನೆ ಹಿತವಲ್ಲ. "ಅತ್ತಿಗೆ ತಾಯಲ್ಲ, ಹಿತ್ತಾಳೆ ಚಿನ್ನಲ್ಲ" ಎಂದು ಅರಿವಾಗುತ್ತದೆ. ತಾಯಿಯಿಲ್ಲದ ತವರಿಗೆ ಹೋದರೆ "ನೀರಿಲ್ಲದ ಕೆರೆಗೆ ಕುರಿ ಬಂದು ಬಳಲಿಕೆ ನೀಗದೆ ಹಿಂತಿರುಗಿದ ಹಾಗೆ" ಎಂದುಕೊಳ್ಳುತ್ತಾಳೆ.

"ತಾಯವ್ವ ಹಾಳಂತ ಏಳು ಗಾವುದ ಬಂದೆ ।
ತಾಯವ್ವ ಇಲ್ಲ ಸೊಸಿ ಹಾಳ, ಅದಕಂಡು
ಹಾವು ತಿರುಗ್ಹಾಂಗ ತಿರುಗಿದೆ".

ಇಲ್ಲಿ ತಾಯಿಯ ಹಂಬಲ, ಅವಳಿಲ್ಲದ ತವರಲ್ಲಿ ಆಕೆಯ ಸೊಸೆಯರ ದರ್ಬಾರನ್ನು ಕಂಡು, ಅಲ್ಲಿ ನಿಲ್ಲದೆ ಹಾವು ತಿರುಗಿದಂಗೆ ಮರಳಿದ ವಿವರ ಇದೆ. ತಾಯಿ ಇಲ್ಲದ ತವರಲ್ಲಿ "ತುದಿಗಟ್ಟಿ ನನಗೆ ಎರವಾಯ್ತು" ಎಂಬ ನೋವು ಆಕೆಯಲ್ಲಿದೆ.

ಚೊಚ್ಚಿಲ ಹೆರಿಗೆಯಲ್ಲಿ ತಾಯಿ ಪ್ರೀತಿಯನ್ನು ಸವಿದ ಮಗಳಿಗೆ ತಾಯಿಯ ಪ್ರೀತಿಯನ್ನು ಕಂಡು ಹೃದಯ ತುಂಬಿ ಬರುತ್ತದೆ. ತಾಯಿಯ ಆದರೋಪಚಾರದ ಪ್ರೀತಿಗೆ ಆ ಪುಟ್ಟ ತಾಯಿಯ ಹೃದಯ ಸ್ಪಂದಿಸುವುದು ಹೀಗೆ.

"ಹಡೆದವ್ವ ಇರುತಾನ ಹಡೀಬೇಕು ಮಕ್ಕಳನ।
ಮುಡಿಬೇಕು ಹಂಪಿ ದವನ್ನವ । ಗಾಜಿನ ಬಳಿಯ
ರಾಯರು ಇರುತ್ತನ ಇಡಬೇಕು ॥"

ಇಲ್ಲಿ ತಾಯಿಯ ಪ್ರೀತಿಯನ್ನು ತನ್ನ ಮುತ್ತೈದೆತನದ ಸಂತಸಕ್ಕೆ ಸಮವಾದುದೆಂದು ಭಾವಿಸುತ್ತಾಳೆ. ತನ್ನ ಬದುಕಿನ ಸರ್ವಸ್ವ ಎಂದು ನಂಬುತ್ತಾಳೆ.

ತನ್ನನ್ನು ಅತ್ಯಂತ ಪ್ರೀತಿಯ ಧಾರೆಯೆರೆದು ಸಾಕಿ ಸಲುಹಿದ ತಂದೆ-ತಾಯಿ, ಅಣ್ಣ-ತಮ್ಮ ಎಲ್ಲರೂ ಸರ್ವಸ್ವವೇ, ಆದರಣೀಯರೆ. ಅವರ ಪ್ರೀತಿಗೆ ಪ್ರತಿಯಾಗಿ ಪರಾವಲಂಬಿಯಾದ ಹೆಣ್ಣಿಗೆ ನೀಡಲು ಬೇರೇನಿದೆ. ಆಕೆ ತನ್ನ ತವರಿಗಾಗಿ ಹಾರೈಸುತ್ತಾಳೆ. ಅದರ ವೃದ್ಧಿ ಸಮೃದ್ಧಿಗಾಗಿ ಬೇಡುತ್ತಾಳೆ. ಅವಳ ಈ ಸದಾಶಯದ ಹಾರೈಕೆ ವ್ಯಕ್ತಗೊಳ್ಳುವುದು ಈ ರೀತಿ.

"ಹಾಲುಂಡ ತವರೀಗೆ ಏನೆಂದು ಹರಸಲಿ ।
ಹೊಳದಂಡೇಲಿರುವ ಕರಕೀಯ । ಕುಡಿಹಾಂಗ
ಹಬ್ಬಲಿ ಅವರ ರಸಬಳ್ಳಿ ॥"

ಎಂದು ಉನ್ನತವಾದ ಹೃದಯ ಸಂಸ್ಕಾರ'ದಿಂದ ತನ್ನ ತವರಿಗೆ ಒಳಿತನ್ನೇ ಹಾರೈಸುತ್ತಾಳೆ. ಕರಕೀಯ ಕುಡಿಗೆ ಇರುವ ಶ್ರೇಷ್ಠತೆ ಮತ್ತು ಪಾವಿತ್ರ್ಯತೆಯೂ ಆಕೆಯ ಮನಸ್ಸಿನಲ್ಲಿರುವುದನ್ನು ನಾವು ಇಲ್ಲಿ ಕಾಣಬಹುದಾಗಿದೆ.

ಹೀಗೆ ಜನಪದ ಸಾಹಿತ್ಯದಲ್ಲಿ ತಾಯಿ ಪ್ರೀತಿಯ ಬಗ್ಗೆ ಅಪಾರವಾದ ಸಂವೇದನೆಗಳಿರುವುದನ್ನು ಕಾಣಬಹುದು. ಆ ಪ್ರೀತಿಯನ್ನು ಹೇಳುವ ಈ ತ್ರಿಪದಿಗಳು ಒಂದು ಸುಂದರವಾದ ಸಾಮಾಜಿಕ ಚಿತ್ರಣವನ್ನು ಕಡೆದು ನಿಲ್ಲಿಸಿಬಿಡುತ್ತವೆ.

ಇನ್ನು ತಾಯಿಗೆ ತನ್ನ ಮಕ್ಕಳ ಬಗ್ಗೆ ಇರುವ ವಾತ್ಸಲ್ಯ ಭಾವವೂ ಜನಪದ ಸಾಹಿತ್ಯದಲ್ಲಿ ಅತ್ಯಂತ ವಿನೂತನವಾಗಿ ಚಿತ್ರಿತವಾಗಿದೆ. ತಾಯಿಯ ಬಗೆಗಿನ ಮತ್ತು ಮಕ್ಕಳ ವಾತ್ಸಲ್ಯಕ್ಕೆ ಸಂಬಂಧಪಟ್ಟಂತಹ ತ್ರಿಪದಿಗಳೇ ಬಹುಶಃ, ಜನಪದ ಸಾಹಿತ್ಯದ ಜನಪ್ರಿಯತೆಗೆ ಕಾರಣವಾದುವೇನೋ ಎಂಬಷ್ಟು ಸುಂದರವಾಗಿ ಈ ತ್ರಿಪದಿಗಳು ರಚಿತವಾಗಿವೆ. ಈ ತ್ರಿಪದಿಗಳನ್ನು ಅರಿಯದ ಜನರೇ ಇಲ್ಲ ಎಂದು ಹೇಳಬಹುದಾಗಿದೆ. ಬಂಜೆಯ ನೋವನ್ನು ಅತ್ಯಂತ ಮನಕರಗಿಸುವಂತೆ ವಿವರಿಸುವ ಜನಪದ ಸಾಹಿತ್ಯವು ಈ ಮಾತೃತ್ವದ ಸಂತೋಷವನ್ನು ರಮಣೀಯವಾಗಿ ಚಿತ್ರಿಸುತ್ತದೆ. ಮಗು ತಾಯಿಗೆ ಸರ್ವಸ್ವ . ಅವಳ ಮಾತೃತ್ವವು ಅವಳ ಹೆಣ್ತನಕ್ಕೊಂದು ಕಳಸವಾಗಿದೆ. "ಆಡೋ ಮಕ್ಕಳ ಕಂಡು ಬೇಡಿತ್ತೋ ನನ ಜೀವ" ಎಂದು ತಾಯಿ ತನ್ನ ಎದೆಯಾಳದ ಮಗುವಿನ ಹಂಬಲವನ್ನು ವ್ಯಕ್ತಪಡಿಸುತ್ತಾಳೆ.

"ಬಾಲನ ಹೆರುವಾಗ ಬಾಡಿತಮ್ಮ ಮೊಗ" ಎಂದು ಪ್ರಸವದ ನೋವನ್ನು ತಿಂದು, ಬಳಲುವ ತಾಯಿಯ ಮೊಗವು, ಮುಂದೆ ಮಗನ ಆಟಗಳನ್ನು ಕಂಡಾಗ, ಅದು ಚಂಡಾಡಿ ಬರುವಾಗ, "ಕುಂದಣದ ಚಿನ್ನ ಹೊಳೆದ್ಹಾಂಗ" ಹೊಳೆಯುತ್ತದೆ. ಆ ಮಗುವೇ ಅವಳ ಸರ್ವಸ್ವವಾಗುತ್ತದೆ. ಆ ಮಗುವಿನಿಂದ ಆಕೆಗೆ ಸಿಗುವ ಸುಖ ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಹುದಾಗಿರುತ್ತದೆ. ಆ ಮಗುವಿನ ನಿರ್ಮಲವಾದ ಸೌಂದರ್ಯ ಅವಳಲ್ಲಿ ಸ್ಫುರಿಸುವ ಭಾವನೆಯು ವಿನೂತನವಾದುದಾಗಿದೆ.

"ತೊಟ್ಟಿಲದಾಗೊಂದು ತೊಳೆದ ಮುತ್ತ್‌ನು ಕಂಡೆ ।  
ಹೊಟ್ಟೆ ಮ್ಯಾಲಾಗಿ ಮಲಗ್ಯಾನೆ । ಕಂದೈಗ  
ಮುತ್ತಿನ ದೃಷ್ಟಿ ತಗೆದೇನ ॥"

ತೊಳೆದ ಮುತ್ತಿನ ಪ್ರಭೆಯು ಆ ಮಗುವಿನ ಕಳೆಯಾಗಿದೆ. ಹೊಟ್ಟೆ ಮೇಲಾಗಿ ಆಡುವ ಮುದ್ದು ಕಂದನ ಸೌಂದರ್ಯವನ್ನು ಕಂಡ ಜನರು ದೃಷ್ಟಿ ಹಾಕಬಹುದೆಂದು ಭಯಪಡುವ ಆ ತಾಯಿಯು, ಮುತ್ತುಗಳಂದಲೇ ದೃಷ್ಟಿಯನ್ನು ತೆಗೆದು ಕೆಡುಕನ್ನು ನಿವಾರಿಸಲು ಬಯಸುತ್ತಾಳೆ. ಆ ಮಗು ಅತ್ತು ಹಟ ಮಾಡಿದರೂ ತಾಯಿಗೇನೋ ಅದರಿಂದ ಬೇಸರವಾಗುವುದಿಲ್ಲ.

"ಅತ್ತರೆ ಅಳಲವ್ವ ಈ ಕೂಸು ನನಗಿರಲಿ  
ಕೆಟ್ಟರೆ ಕೆಡಲಿ ಮನಿಗೆಲಸ । ಕಂದನಂಥ  
ಮಕ್ಕಳಿರಲವ್ವ ಮನಿತುಂಬ ॥"

ಆಧುನಿಕ ಸೌಲಭ್ಯಭರಿತ ಸುಖ ಜೀವನದಲ್ಲಿರುವ ನಮಗೆ, ಎರಡು ಮಕ್ಕಳೇ ರೇಜಿಗೆ ಎನಿಸುವ ಮನಸ್ಥಿತಿ ಇದ್ದು; ಮನೆಗೆಲಸ ಕೆಟ್ಟರೂ ಮನೆ ತುಂಬಾ ಮಕ್ಕಳಿರಲೆಂದು ಬಯಸುವ ಆ ಮಾತೃ ಹೃದಯ ನಮ್ಮಲ್ಲಿ ಬೆರಗನ್ನು ಹುಟ್ಟಿಸುತ್ತದೆ. ಆ ತಾಯಿಗೆ ಮಗುವಿನ ಅಳುವೂ ಸುಖ ನೀಡಲು ಕಾರಣ, ಅದರಲ್ಲಿ ಆಕೆ ಕಾಣುವ ಸೌಂದರ್ಯವೇ ಆಗಿದೆ. ಆಕೆಗೆ 'ಅಳುವ ಕಂದನ ತುಟಿಯು ಹವಳದ ಕುಡಿಹಾಂಗ', ಅವನ ಕುಡಿಹುಬ್ಬು 'ಬೇವಿನೆಸಳ್ಹಾಂಗ', ಅವನ ಕಣ್ಣೋಟ 'ಶಿವನ ಕೈಯಲಗು ಹೊಳೆದ್ಹಾಂಗ' ಕಾಣುತ್ತದೆ.

"ಆಡಿಬಾ ನನ ಕಂದ, ಅಂಗಾಲ ತೊಳೆದೇನ।  
ತೆಂಗಿನ ಕಾಯಿ ತಿಳಿನೀರ। ತಕ್ಕೊಂಡು  
ಬಂಗಾರದ ಮಾರೀ ತೊಳೆದೇನ ॥"

ತಾಯಿಯ ಪ್ರೇಮ ಎಷ್ಟು ಗಾಢವಾದುದೆಂದರೆ, ಆ ಮಗು ಏನು ಮಾಡಿದರೂ ಆಕೆಗೆ ಚಂದವೇ. ಆಡಿ ಬಂದ ಮಗುವಿನ ಕೈಕಾಲು ಮುಖವನ್ನು ತೊಳೆಸಲು ಆಕೆ ತೆಂಗಿನ ಕಾಯ ಎಳನೀರನ್ನು ಬಳಸುತ್ತಾಳೆ.

"ಕೂಸು ಇದ್ದ ಮನೆಗೆ ಬೀಸಣಿಕಿ ಯಾತಕ।  
ಕೂಸು ಕಂದಯ್ಯ ಒಳ ಹೊರಗ। ಆಡಿದರೆ  
ಬೀಸಣಿಕೆ ಗಾಳಿ ಸುಳಿದಾವ ॥"

ತಾಯಿಗೆ ತನ್ನ ಮಗು ಮನೆಯ ಒಳ ಹೊರಗೆ ಓಡಾಡಿದರೇ ತಂಪಾದ ಗಾಳಿ ಬೀಸಿದ ಅನುಭವ. ಇಲ್ಲಿ ತಾಯಿಯ ವಾತ್ಸಲ್ಯದ ಭಾವವು ಸಹಜ ಕಾವ್ಯದ ಸೌಂದರ್ಯವನ್ನು ಹುಟ್ಟಿಸುವ ಅಭಿವ್ಯಕ್ತಿಯಾಗುತ್ತದೆ.

"ಹಾವಿನ ಹೆಡೆ ಚಂದ, ಮಾವಿನ ಮಿಡಿಚಂದ।  
ಹಾರಾಡಿ ಬರುವ ಗಿಣಿ ಚಂದ। ಕಂದಯ್ಯ।  
ನೀ ಚಂದ ನಮ್ಮ ಮನೆಗೆಲ್ಲ॥"

ತಾಯಿ ಪ್ರಕೃತಿಯ, ಪ್ರಾಣಿ ಪಕ್ಷಿಗಳ ಚೆಲುವಿನಿಂದ ತನ್ನ ಮಗುವಿನ ಸೌಂದರ್ಯವನ್ನು ವರ್ಣಿಸಲು ಪ್ರಯತ್ನಿಸುತ್ತಾಳೆ. ಅವಳಿಗೆ ತನ್ನ ಮಗುವಿನದು ಕಾಡಿಗ್ಹಚ್ಚಿದ ಕಣ್ಣು, ತೀಡಿ ಮಾಡಿದ ಹುಬ್ಬಾಗಿದೆ. ""ಆ ಮಗುವಿನ ಕಣ್ಣು ಮಾವಿನ ಹೋಳು" ಎಂಬಲ್ಲಿ, ಆಕೆ ಬಳಸುವ ಹೋಲಿಕೆಯು ಸ್ವೋಪಜ್ಞವಾದ ಕವಿ ಸಮಯದ ಸೌಂದರ್ಯದ ಅರಿವನ್ನುಂಟು ಮಾಡುತ್ತದೆ.

ತಾಯಿಯ ಎದೆಹಾಲನ್ನು ಕುಡಿದು ನಲಿಯುವ ಮಗುವಿನ ಚಿತ್ರ ಜನಪದ ಕಾವ್ಯದಲ್ಲಿ ಮೂಡಿ ಬಂದಿರುವುದು ಅತ್ಯಂತ ಸುಂದರವಾಗಿದೆ.

"ಅಂಬೇಗಾಲಿಕ್ಕುತ ತುಂಬೀಯ ಕರೆವನು।  
ಹಂಬಲಿಸಿ ತಾಯ ಮೊಲೆಯನ್ನು । ತುಯ್ದಾಡಿ॥  
ಬೆಂಬಿಡದೆ ಹಾಲ ಕುಡಿವಾನು॥"

ಹಂಬಲದಿಂದ ಮೊಲೆಹಾಲ ಕುಡಿವ ಮಗುವಿನ ಚಿತ್ರಣವು ಈ ತ್ರಿಪದಿಯಲ್ಲಿ ಇದ್ದರೆ, ತಾಯಿಯೇ ತನ್ನ ಎದೆಹಾಲನ್ನು ಕುಡಿಯಲು ತನ್ನ ಮಗುವನ್ನು ಆಹ್ವಾನಿಸುವ ತ್ರಿಪದಿ ಮತ್ತೊಂದು ಬಗೆಯದಾಗಿದೆ.

" ಬಾರಯ್ಯ ಬಾ ನನ್ನ ಬಾಲ ಚಕ್ರವರ್ತಿ।
ನಾಲಿಗಿ ಮ್ಯಾಲ ಸರಸೋತಿ। ಇರುವಂಥ।
ನನ ಬಾಲ ಹಾಲ ಕುಡಿಬಾರೋ॥

ಎಂದು ತನ್ನ ಮಗುವಿನ ಜಾಣ್ಮೆಯನ್ನು ಪ್ರಶಂಸಿಸುತ್ತಾ ಮಾತೃವಾತ್ಸಲ್ಯವನ್ನು ತೋರುತ್ತಾಳೆ. ತನ್ನ ಮಗುವು ತನ್ನ ಮನೆಗೆ ಚಕ್ರವರ್ತಿಯೆಂದೋ, ಅಥವಾ ಆತ ಮುಂದೆ ಚಕ್ರವರ್ತಿಯಾಗಲೆಂದೋ ಹಾರೈಸುತ್ತಾಳೆ. ಆ ಮಗುವು ಅತ್ಯುತ್ತಮವಾದ ಸಂಸ್ಕಾರವನ್ನು ಪಡೆಯಬೇಕೆಂಬುದು ಆ ತಾಯಿಯ ಹೃದಯದ ಹಾರೈಕೆಯಾಗುತ್ತದೆ.

"ಆಚಾರಕ್ಕರಸಾಗು ನೀತಿಗೆ ಪ್ರಭುವಾಗು।
ಮಾತಿನಲಿ ಚೂಡಾಮಣಿಯಾಗು। ಬಾಲನೀ।
ಜ್ಯೋತಿಯೇ ಆಗು ಜನಕೆಲ್ಲ॥"

ಎಂದು ಹರಸುತ್ತಾಳೆ. ತನ್ನ ಮಗುವು ಆಚಾರ, ವಿಚಾರ, ನೀತಿ, ಮಾತು ಎಲ್ಲದರಲ್ಲೂ ಶ್ರೇಷ್ಠತೆಯನ್ನು ಸಾಧಿಸಲೆಂಬುದು ಆಕೆಯ ಬಯಕೆ ಮತ್ತು ಹರಕೆಯಾಗುತ್ತದೆ. ಈ ಒಂದು ಉನ್ನತವಾದ ಸಂಸ್ಕಾರದಿಂದ ಇಡೀ ಜಗತ್ತಿಗೇ ಬೆಳಕಾಗು ಎಂದು ತನ್ನ ಮಗುವಿಗೆ ಹಾರೈಸುತ್ತಾಳೆ. ಎಲ್ಲ ತಾಯಂದಿರೂ ತಮ್ಮ ಮಕ್ಕಳಿಗೆ ಹರಸುವ ಮತ್ತು ಹರಸಬೇಕಾದ ಅತ್ಯುತ್ತಮವಾದ ಮಾತುಗಳಿವು.

"ಆಡೂತ ಬಂದಯ್ಯ ಹಾಲು ಸಕ್ಕರೆ ಕೊಡುವೆ।
ಮಾಡಿಸಿ ಕೊಡುವೆ ಮರಿಗಿಲ್ಕಿ । ಕಂದಯ್ಯ ।
ತಿದ್ದೀಸಿ ಕೊಡುವೆ ಬಸವನ್ನ॥"

ಆಡಿ ಬಂದ ಮಗುವಿಗೆ ಆಮಿಷಗಳೊಂದಿಗೆ ಆಡಿಸುವ, ಆರೈಕೆ ಮಾಡುವ ತಾಯಿಯ ಚಿತ್ರವನ್ನು ನಾವಿಲ್ಲಿ ಕಾಣಬಹುದಾಗಿದೆ. ಮಕ್ಕಳ ಮನಸರಿತು ಒಲೈಸುವ ಕಲೆ ತಾಯಿಗೆ ಸಿದ್ಧಿಸಿದಷ್ಟು ಬೇರಾರಿಗೂ ಸಿದ್ಧಿಸಿಲ್ಲ. ಆಕೆ ಮಾತ್ರ ಮಗುವನ್ನು ರಮಿಸಬಲ್ಲಳು.

"ಬಾಲ ಹನುಮನ ಮುಂದ ಬಾಗಿ ಚಂಡಾಡ್ಯಾನ।
ಬಾವುಲಿಗಿವಿಯ ನನ ಬಾಲ। ಕಂಡರೆ।
ಬಾಲ್ಯಾರು ಬಸಿರು ಬಯಸ್ಯಾರ॥"

ಮಗುವಿನ ಬಾಲ್ಯ ದೈವಿಕ ಸಂಸ್ಪರ್ಶವನ್ನು ಹೊಂದಿರುವಂತಹುದು ಎಂಬ ಭಾವನೆಯನ್ನು ಈ ತ್ರಿಪದಿಯಲ್ಲಿ ಕಾಣಬಹುದಾಗಿದೆ. 'ಬಾವುಲಿಗಿವಿ'ಯು ಇಲ್ಲಿ ಅದೃಷ್ಟದ ಮತ್ತು ಸೌಂದರ್ಯದ ಸೂಚಕವಾಗಿದೆ. ಈ ಕಾರಣಕ್ಕಾಗಿಯೇ ತಾಯಿಗೆ ತನ್ನ ಮಗುವಿನ ಬಗ್ಗೆ ಹೆಮ್ಮೆಯಿದೆ. ತನ್ನ ಮಗುವಿನ ಸೌಂದರ್ಯವನ್ನು ಕಂಡರೆ ಬಾಲೆಯರೂ ಬಸಿರನ್ನು ಬಯಸುವರು ಎಂಬ ಭಾವ ಸುಂದರವಾಗಿದೆ. ಇಂತಹ ಮಗುವಿನ ಒಡನಾಟದಲ್ಲಿ, ಸೌಂದರ್ಯಾನುಭೂತಿಯಲ್ಲಿ ಆಕೆ ತನ್ನ ಗಂಡನನ್ನು ಮರೆಯುತ್ತಾಳೆ.

"ತೋಳುದ್ದ ತಲೆಗಿಂಬು ಮಾರುದ್ದ ಹಾಸೀಗಿ।
ಮಾಣಿಕ್ಯದಂಥ ಮಗ ಮುಂದ । ಮಲಗಿದರೆ।
ಮಾರಾಯ್ರ ಗೊಡವೆ ನನಗೇನ॥"

ಮಲಗಿದ ಮಗುವನ್ನೇ ನೆಟ್ಟ ನೋಟದಿಂದ ನೋಡುತ್ತಾ ಕುಳಿತ ತಾಯಿಗೆ ಪರಿಸರದ ಅಥವಾ ಬೇರೆ ಯಾರ ನೆನಪೂ ಇರುವುದಿಲ್ಲ. ಅವಳಿಗೆ ತನ್ನ ಮಗುವಿನ ಸೌಂದರ್ಯವಷ್ಟೇ ಇಲ್ಲಿ ಮುಖ್ಯವಾಗುವುದಿಲ್ಲ. ಆ ಮಗು ಅವಳಿಗೆ ಮಾಣಿಕ್ಯದಷ್ಟು ಅಮೂಲ್ಯವೂ ಹೌದು.

"ತಾಯಿದ್ರೆ ತವರ್ಹೆಚ್ಚು ತಂದಿದ್ರ ಬಳಗ್ಹೆಚ್ಚು।
ಸಾವಿರಕೆ ಹೆಚ್ಚು ಪತಿ ಪುರುಷ । ಹೊಟ್ಟೇಯ।
ಮಾಣಿಕದ ಹರಳು ಮಗಹೆಚ್ಚು॥"

ತಾಯಿ, ತಂದೆ, ಪತಿ ಎಲ್ಲರೂ ಹೆಚ್ಚೆನಿಸಿದರೂ, ಹೊಟ್ಟೆಯ ಮಗ ಮಾಣಿಕ್ಯದ ಹರಳಾಗಿ ಅತಿ ಮುಖ್ಯನಿಸುತ್ತಾನೆ. ತಾಯಿಗೆ ತನ್ನ ಮಗುವೇ ಸರ್ವಸ್ವವೆನಿಸುತ್ತದೆ.

ತನ್ನ ಸೆರಗನ್ನು ಹಿಡಿದು, ಸೀರೆಯ ನೆರಿಯನ್ನು ಹಿಡಿದು ಕಾಡುವ ಕೂಸು ತಾಯಿಗೆ ಪ್ರಿಯವೇ.

"ಸೆರಗನ್ನು ಬಿಡು ನನ್ನ ಸೆರಗೀನ ಕಂದಯ್ಯ
ನೆರಿಯನ್ನು ಬಿಡು ನನ್ನ ರಘುರಾಮ। ರಾಮಣ್ಣ।
ಕಡಲೇಯ ಕೊಡುವೆ ನಡೆಮುಂದೆ॥"

ಕಾಡುವ ಕೂಸಿಗೆ ಕಡಲೆಯ ಆಸೆಯನ್ನು ಒಡ್ಡಿ, ಅದರಿಂದ ಬಿಡಿಸಿಕೊಳ್ಳುವುದು, ಅದರ ಗಮನವನ್ನು ಬೇರೆಡೆಗೆ ಸೆಳೆಯುವುದು ತಾಯಿಗೇನೂ ಕಷ್ಟವಲ್ಲ. ಎಂತಹ ಸಂದರ್ಭದಲ್ಲೂ ಮಗುವನ್ನು ಆಕೆ ವಾತ್ಸಲ್ಯದಿಂದ ತಬ್ಬುತ್ತಾಳೆ. ತಾಯಿ ತನ್ನ ಕಂದನನ್ನು ಎಲ್ಲಾ ಕಾಲದಲ್ಲೂ ಅಂತರಾಳದಿಂದ ಹರಸುತ್ತಾಳೆ.

“ಎಲ್ಲಾರೆ ಇರಲವ್ವ ಹುಲ್ಲಾಗಿ ಬೆಳೆಯಲಿ।
ನೆಲ್ಲಿ ಬಡ್ಯಾಗಿ ಚಿಗಿಯಾಲಿ । ಕಂದಯ್ಯ।
ಜಯವಂತನಾಗಿ ಬೆಳೆಯಲಿ॥”

ಎಂದು ಮಗುವಿಗೆ ತನ್ನ ವಾತ್ಸಲ್ಯದಿಂದ ರಕ್ಷಣೆಯನ್ನು ಇತ್ತು ಬೆಳೆಸುತ್ತಾಳೆ. ಮಗುವಿನ ಬೆಳವಣಿಗೆಯಲ್ಲಿ, ಏಳ್ಗೆಯಲ್ಲಿ ಅವಳ ಬದುಕಿನ ಸಫಲತೆ ಇದೆ. ಸಂತೃಪ್ತಿ ಇದೆ.

ಹೀಗೆ ತಾಯಿ– ಮಗುವಿನ ವಾತ್ಯಲ್ಯದ ವರ್ಣನೆ ಜನಪದ ಸಾಹಿತ್ಯದಲ್ಲಿ ಅತ್ಯಂತ ಅಗಾಧವಾಗಿ ಮೂಡಿಬಂದಿದೆ. ಆ ಅಗಾಧತೆಯ ಸಮುದ್ರದ ಎದುರು ಇಲ್ಲಿ ಉಲ್ಲೇಖಿಸಿರುವ ಪದ್ಯಗಳು ಸಾಗರದ ಕೆಲವೇ ಹನಿಗಳಾಗಿವೆ. ಈ ಪದ್ಯಗಳು ಸಾಮಾನ್ಯ ಜನರ ಮಾನಸ ಲೋಕದಲ್ಲಿ ನಲಿದ ಭಾವಗಳಾಗಿವೆ. ಮನುಷ್ಯನ ಬದುಕಿನ ಇಂತಹ ಭಾವನಾತ್ಮಕ, ಮಾನವೀಯ ಕ್ಷಣಗಳು ಜನಪದ ಸಾಹಿತ್ಯ ಸೃಷ್ಟಿಗೆ ವಿಶೇಷ ಪ್ರಚೋದನೆಯನ್ನು ಕೊಟ್ಟಿವೆ.